**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ**

**ಸಿ.ಸಿ.ನಂ.3699/2021**

**ದಿನಾಂಕಃ05.09.2022**

**ಪಿರ್ಯಾದುದಾರರುಃ-** ಶ್ರೀ ಸಿದ್ದಪ್ಪ ಬಿನ್ ಸಿದ್ದೇಗೌಡ, 34 ವರ್ಷ,
ವಾಸಃ ಆಲಗೂಡು ಗ್ರಾಮ, ಅರಕೆರೆ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

-ವಿರುದ್ದ-

**ಆರೋಪಿಃ-** ಶ್ರೀ ಸ್ವಾಮಿ ಬಿನ್ ಲೇಟ್. ಮಾದಯ್ಯ, 32 ವರ್ಷ,
ಖಾಯಂ ವಾಸಃ ಉರಮಾರಕಸಲಗೆರೆ ಗ್ರಾಮ,
ಕೊತ್ತತ್ತಿ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ.

ಹಾಲಿವಾಸಃ ಭದ್ರ ರಸ್ತೆ, 7 ನೇ ವಾರ್ಡ್,
20 ನೇ ಕ್ರಾಸ್, ವಿ.ವಿ. ನಗರ, ಕಲ್ಲಹಳ್ಳಿ, ಮಂಡ್ಯ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಃ-ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?**

**ಉ ಃ**

ಪ್ರ:- ಪ್ರಾಸಾ-1 ಸಿದ್ದಪ್ಪ ಇವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ಮತ್ತು ಸಿದ್ದಪ್ಪ ರವರು ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚುಗಳಿಗಾಗಿ ಹಾಗೂ ಇತರ ಕಾನೂನು ಬದ್ದ ಅವಶ್ಯಕತೆಗಳಿಗಾಗಿ ಪಿರ್ಯಾದುದಾರರಿಂದ 2017 ರ ಮಾರ್ಚ್ ತಿಂಗಳಲ್ಲಿ 1,00,000/-ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣದ ತೀರುವಳಿಗಾಗಿ ನೀವು ಖಾತೆ ಹೊಂದಿರುವ ಆಕ್ಸಿಸ್ ಬ್ಯಾಂಕ್, ಮಂಡ್ಯ ಶಾಖೆಯ ಚೆಕ್ಕು ಸಂಖ್ಯೆಃ 003670 ನ್ನು ರೂ.1,00,000/-ಗಳಿಗೆ ದಿಃ21.06.2017 ರ ದಿನಾಂಕ ನಮೂದಿಸಿ ಹಣ ಪಡೆದುಕೊಳ್ಳುವಂತೆ ಹೇಳಿ ಪಿರ್ಯಾದುದಾರರಿಗೆ ನೀಡಿರುತ್ತೀರೆಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉಃ

ಪ್ರ:- ಪ್ರಾಸಾ 1 ರವರು ಮುಂದುವರಿದ ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ನೀಡಿದ್ದ ಚೆಕ್ಕನ್ನು ನಗದೀಕರಿಸುವ ಸಲುವಾಗಿ ಪಿರ್ಯಾದುದಾರರು ಅವರು ಖಾತೆ ಹೊಂದಿರುವ ಆಕ್ಸಿಸ್ ಬ್ಯಾಂಕ್, ಮಂಡ್ಯ ಶಾಖೆಯ ಬ್ಯಾಂಕಿಗೆ ದಿ:24.08.2017 ರಂದು ಸಲ್ಲಿಸಿದಾಗ ಸದರಿ ಚೆಕ್ ನಗದಾಗದೇ ನಿಮ್ಮ ಖಾತೆಯಲ್ಲಿ ಚೆಕ್ಕನ್ನು ಪುರಸ್ಕರಿಸುವಷ್ಟು ಹಣವಿಲ್ಲ (Fund Insufficient) ಎಂಬ ಹಿಂಬರಹದೊಂದಿಗೆ ದಿನಾಂಕ:24.08.2017 ರಂದು ಚೆಕ್ ಅಮಾನ್ಯಗೊಂಡು ವಾಪಸ್ ಮಾಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:

ಪ್ರ:- ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರು ವಕೀಲರು ಮೂಲಕ ಹಣ ವಾಪಸ್ಸು ನೀಡುವಂತೆ ದಿ: 21.09.2017 ರಂದು ಅಂಚೆ ನೋಂದಣಿ ಮೂಲಕ ನಿಮಗೆ ನೋಟಿಸ್ ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:

ಉ :

ಪ್ರ:-ಪ್ರಾಸಾ-1ರವರು ಮುಂದುವರಿದ ತಮ್ಮ ಸಾಕ್ಷ್ಯದಲ್ಲಿ ಸದರಿ ನೋಟೀಸ್ ನಿಮಗೆ ದಿ:22.09.2017 ಮತ್ತು 03.10.2017 ರಂದು ಖುದ್ದು ಜಾರಿಯಾಗಿದ್ದು ಅಂಚೆ ಸ್ವೀಕೃತಿಯು ವಾಪಸ್ಸಾಗಿರುತ್ತದೆ. ಆದಾಗ್ಯೂ ಚೆಕ್ ನ ಅಡಿಯಲ್ಲಿ ಕೊಡಬೇಕಾದ ಯಾವುದೇ ಹಣವನ್ನು ವಾಪಸ್ ಕೊಟ್ಟಿಲ್ಲ ಹಾಗೂ ಯಾವುದೇ ಪ್ರತ್ಯುತ್ತರ ನೀಡಿಲ್ಲ ಎಂದು ಹೇಳಿ ನೀವು ಪಿರ್ಯಾದುದಾರರಿಗೆ ನಿಮ್ಮ ಖಾತೆಯಲ್ಲಿ ಹಣವಿಲ್ಲವಿರುವುದೂ ಗೊತ್ತಿದ್ದರೂ ಸಹ ದಿ:26.07.2021 ರ ಹಳೆಯ ಚೆಕ್ ನೀಡಿ ವಂಚಿಸಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉ:

ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿದ ಚೆಕ್ ಅನ್ನು ನಿಪಿ-1 ಎಂದು ಅದರಲ್ಲಿ ನಿಮ್ಮ ಸಹಿಯನ್ನು ನಿಪಿ-1 ಎ ಎಂದು ಗುರುತಿಸಿದ್ದು, ಬ್ಯಾಂಕಿನವರು ನೀಡಿದ ಹಿಂಬರಹವನ್ನು ನಿಪಿ-2, , ಅಂಚೆ ಇಲಾಖೆಯವರು

ನೀಡಿರುವ ಎರಡು ರಸೀದಿಗಳನ್ನು ನಿಪಿ-3 ಮತ್ತು ನಿಪಿ-4, ವಕೀಲರು ನಿಮಗೆ ಕಳುಹಿಸಿದ ನೋಟಿಸ್ ನಿಪಿ-5 ಹಾಗೂ ಅಂಚೆ ಇಲಾಖೆಯವರು ನೀಡಿರುವ ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ-6 ಮತ್ತು ನಿಪಿ-7 ಎಂದು ಹಾಜರುಪಡಿಸಿ ನಿಶಾನಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ**?**

ಉಃ

**ಪ್ರಃ-ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?**

**ಉಃ**

**ಪ್ರಃ-ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?**

**ಉಃ**

**ಪ್ರಃ-ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸುವಿರಾ?**

**ಉಃ**

**ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಎದುರು ಆರೋಪಿತರಿಗೆ ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದು ಕೊಳ್ಳಲಾಗಿದೆ ಎಂದು ಧೃಢೀಕರಿಸಲಾಗಿದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ**
**ದಂಡಾಧಿಕಾರಿಯವರು, ಶ್ರೀರಂಗಪಟ್ಟಣ.**

**ಆರೋಪಿ ಸಹಿ ಃ**